number of persons ? Sir, in view of experience in this behalf, every permission sought for is only formally sought for, but in practice it is flouted. Is it not high time that this rule is given up ?

† SRI MANIK RAO PATIL. —Sir, this order has been issued on the advice of the Government of India. We have no say in this regard. Anyhow, since the Hon'ble Member wants some relaxation in the rule, I will get it examined.

SRI A. LAKSHMISAGAR.—When this order was issued by the Government of India ?

SRI MANIK RAO PATIL. —This order has been issued in the year 1972.

ಹೊಳೇನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿರುವ ಸರಕಾರಿ ಪ್ರೌಢ ಶಾಲೆಗಳ ಕಟ್ಟಡಗಳ ನಿರ್ಮಾಣದ ಬಗ್ಗೆ.

೪೩. ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ) ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣದ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

(ಅ) ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಈ ಕೆಳಕಂಡ ಐದು ಸರಕಾರಿ ಪ್ರೌಢ ಶಾಲೆಗಳು ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ;

ಹೊಳೇನರಸೀಪುರ ತಾಲ್ಲೂಕು

೧. ಸರ್ಕಾರಿ ಪ್ರೌಢಶಾಲೆ, ಹಳೇಕೋಟೆ
೨. ಸರ್ಕಾರಿ ಪ್ರೌಢಶಾಲೆ, ಗುಬ್ಬಿ
೩. ಸರ್ಕಾರಿ ಪ್ರೌಢಶಾಲೆ, ಚಾಕೇನಹಳ್ಳಿ

ಚನ್ನರಾಯಪಟ್ಟಣ ತಾಲ್ಲೂಕು

೧. ಸರ್ಕಾರಿ ಪ್ರೌಢಶಾಲೆ, ಕುಂದೂರು ಮಠ
೨. ಸರ್ಕಾರಿ ಪ್ರೌಢಶಾಲೆ, ಉದಯಪುರ

(ಆ) ಮೇಲ್ಕಂಡ ಐದು ಪ್ರೌಢಶಾಲೆಗಳು ಈಗಾಗಲೇ ಕೆಲವು ಕುಸಿದು ಬಿದ್ದು ಇನ್ನು ಕೆಲವು ಕುಸಿದು ಬೀಳುವ ಸ್ಥಿತಿಯಲ್ಲಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

(ಇ) ಈ ಐದು ಪ್ರೌಢಶಾಲೆಗಳಿಗೆ ಖಾಯಂ ಕಟ್ಟಡ ಕಟ್ಟಲು ಸರ್ವೆ ಅಂದಾಜು ಮಾಡಿಸಲಾಗಿದೆಯೆ, ಹಾಗಿದ್ದರೆ ಅವುಗಳ ಅಂದಾಜು ಮೊಬಲಗೆಷ್ಟು ?

(ಈ) ಈ ಆರ್ಥಿಕ ವರ್ಷದಲ್ಲಿಯೇ (೧೯೮೦-೮೧) ಮೇಲ್ಕಂಡ ಪ್ರೌಢಶಾಲೆಗಳಿಗೆ ಕಟ್ಟಡವನ್ನು ಕಟ್ಟಲು ಮಂಡಿಸಲಾಗಿರುವ ಅಂದಾಜನ್ನು ಮಂಜೂರು ಮಾಡಿ ಕಟ್ಟಡ ಕೆಲಸವನ್ನು ಪ್ರಾರಂಭಿಸಲು ಸರಕಾರ ಉದ್ದೇಶಿಸಿದೆಯೇ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಪ್ರಾಥಮಿಕ ಹಾಗು ಮಾಧ್ಯಮಿಕ ಶಿಕ್ಷಣದ ರಾಜ್ಯ ಮಂತ್ರಿಗಳು).—

(ಅ) ಬಂದಿದೆ. ಆದರೆ, ಈ ಪ್ರೌಢಶಾಲೆಗಳಲ್ಲಿ ಚಾಕೇನಹಳ್ಳಿ ಮತ್ತು ಕುಂದೂರು ಮಠ ಪ್ರೌಢಶಾಲೆಗಳು ಮಾತ್ರ ಖಾಸಗಿ ಕಟ್ಟಡದಲ್ಲಿ ನಡೆಸಲ್ಪಡುತ್ತಿವೆ ಉಳಿದ ೩ ಪ್ರೌಢಶಾಲೆಗಳು ತಾಲ್ಲೂಕು ಅಭಿವೃದ್ಧಿ ಮಂಡಳಿಯವರು ಸರಕಾರಕ್ಕೆ ವಹಿಸಿಕೊಟ್ಟ ಕಟ್ಟಡದಲ್ಲಿ ನಡೆಯುತ್ತಿವೆ.

(ಆ) ಬಂದಿದೆ. ಚಾಕೇನಹಳ್ಳಿ ಮತ್ತು ಉದಯಪುರ ಪ್ರೌಢಶಾಲೆಗಳ ಕಟ್ಟಡಗಳು ಕುಸಿದು ಬಿದ್ದಿರುತ್ತವೆ. ಮತ್ತು ೧೯೮೦ನೇ ಜುಲೈ ತಿಂಗಳಲ್ಲಿ ಜೋಡಿ ಗುಬ್ಬಿ ಪ್ರೌಢಶಾಲಾ ಕಟ್ಟಡವು ಕುಸಿದು ಬಿದ್ದಿರುವುದು. ಕುಂದೂರು ಮಠ ಪ್ರೌಢಶಾಲೆಯೂ ಬಾಡಿಗೆ ಕಟ್ಟಡದಲ್ಲಿಯೂ ಮತ್ತು ಹಳೇಕೋಟೆ ಪ್ರೌಢಶಾಲಾ ಕಟ್ಟಡ ದುರಸ್ತಿಗೊಳಿಸಿದ್ದು ತಾತ್ಕಾಲಿಕವಾಗಿ ಯಾವ ಆಪಾಯವಿರುವುದಿಲ್ಲ.

(ಇ) ಆಗಿಲ್ಲ. ಆದುದರಿಂದ ಅವುಗಳ ಅಂದಾಜು ಮೊಬಲಗು ಉದ್ಭವಿಸುವುದಿಲ್ಲ. ಆದರೆ ಈ ಐದು ಪ್ರೌಢಶಾಲೆಗಳನ್ನು ಕಟ್ಟಡವನ್ನು ಒದಗಿಸಬೇಕಾದ ಶಾಲಾ ಆದ್ಯತಾ ಪಟ್ಟಿಯಲ್ಲಿ ಸೇರಿಸಲಾಗಿದೆ.

೧.	ಹಳೇಕೋಟೆ	೧೯೭೯–೮೦
೨.	ಗುಬ್ಬಿ	
೩.	ಚಾಕೇನಹಳ್ಳಿ ಪ್ರೌಢಶಾಲೆಗಳು	
೪.	ಉದಯಪುರ	೧೯೮೦–೮೧
೫.	ಕುಂದೂರು ಮಠ	೧೯೮೨–೮೩

(ಈ) ೧೯೭೯–೮೦ನೇ ಸಾಲಿನಲ್ಲಿ ಹಣಕಾಸಿನ ಮುಗ್ಗಟ್ಟಿನಿಂದ ಯಾವುದೇ ಶಾಲೆಗೆ ನೂತನ ಕಟ್ಟಡ ಒದಗಿಸಲಿಲ್ಲ. ಆದರೆ, ಪ್ರಶ್ನೆಯ (ಇ) ಉತ್ತರದಲ್ಲಿ ತಿಳಿಸಿರುವಂತೆ ಈ ಐದು ಪ್ರೌಢಶಾಲೆಗಳನ್ನು ಒದಗಿಸಬೇಕಾದ ಶಾಲಾ ಆದ್ಯತಾ ಪಟ್ಟಿಯಲ್ಲಿ ಸೇರಿಸಲಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರೇ, ೫ ಪ್ರೌಢಶಾಲೆಗಳಿಗೆ ಕಟ್ಟಡವಿಲ್ಲವೆಂದು ಉತ್ತರದಲ್ಲಿಯೇ ಮಾನ್ಯ ಮಂತ್ರಿಗಳವರು ಕೊಟ್ಟಿದ್ದಾರೆ. ಅದರಲ್ಲಿ ೩ ಪ್ರೌಢಶಾಲೆಗಳನ್ನು ತಾಲ್ಲೂಕ್ ಬೋರ್ಡಿನವರಿಂದ ಸರ್ಕಾರ ವಹಿಸಿಕೊಂಡು ಇಲ್ಲಿಗೆ ಸುಮಾರು ಒಂದು ವರ್ಷವಾಗಿದ್ದರೂ ಸಹ ಆ ಶಾಲೆಗಳಿಗೆ ಸ್ವಂತ ಕಟ್ಟಡವಿಲ್ಲ. ಎರಡನೆಯದಾಗಿ ಮಾನ್ಯ ಮಂತ್ರಿಗಳವರು ಕೊಟ್ಟಿರುವ ಉತ್ತರದಲ್ಲಿ ೧೯೭೯–೮೦ನೇ ಸಾಲಿಗೆ ಹಳೇಕೋಟೆ, ಗುಬ್ಬಿ, ಚಾಕೇನ ಹಳ್ಳಿ ಶಾಲೆಗಳನ್ನು ಸೇರಿಸಿಕೊಂಡಿದ್ದಾರೆ ಮತ್ತು ೧೯೮೦ ೮೧ನೇ ಸಾಲಿಗೆ ಉದಯಪುರ ಪ್ರೌಢಶಾಲೆಯನ್ನು ಸೇರಿಸಿಕೊಂಡಿದ್ದಾರೆ. ಕೊನೆಯದಾಗಿ ಕುಂದೂರು ಮಠದ ಶಾಲೆಯನ್ನು ೧೯೮೨–೮೩ಕ್ಕೆ ಸೇರಿಸಿಕೊಂಡಿದ್ದಾರೆ. ಇದೇನೋ ಪಟ್ಟಿಯಲ್ಲಿ ಸೇರಿಸಲಾಗಿದೆ ಆದರೆ ಅದನ್ನು ಯಾವಾಗ ಕಾರ್ಯರೂಪದಲ್ಲಿ ತರುವುದಕ್ಕೆ ಸಾಧ್ಯವಾಗುತ್ತದೆ ?

† ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಈಗ ಚಾಕೇನಹಳ್ಳಿ ಮತ್ತು ಕುಂದೂರು ಮಠದ ಶಾಲೆಗಳು ಮಾತ್ರ ಪ್ರೈವೇಟ್ ಬಿಲ್ಡಿಂಗ್‌ನಲ್ಲಿ ನಡೆಯುತ್ತಿದೆ. ಹಳೇಕೋಟೆ, ಗುಬ್ಬಿ ಮತ್ತು ಉದಯಪುರ ಶಾಲೆಗಳನ್ನು ಟಿ ಡಿ.ಬಿ. ಯವರಿಂದ ಟೇಕನ್ ಓವರ್ ಶಾಲೆಗಳಾದ ನಂತರ ತಿವು ಆದೇ ಸ್ಕೂಲ್‌ಗಳಲ್ಲಿ ನಡೆಯುತ್ತಿವೆ. ಹಳೇಕೋಟೆ ಶಾಲೆಗೆ ಈಗಾಗಲೇ ದುರಸ್ತಿ ಕಾರ್ಯನಡೆದಿದೆ ಯಾವ ಆಪಾಯವೂ ಇಲ್ಲವೆಂದು ವರದಿ ಬಂದಿದೆ. ಈಗ ಉಳಿದಿರುವುದು ಗುಬ್ಬಿ ಮತ್ತು ಉದಯಪುರ ಶಾಲೆಗಳು. ಆದಕ್ಕೆ ಅದನ್ನು ೧೯೮೦–೮೧ನೇ ಸಾಲಿನ ಪಟ್ಟಿಯಲ್ಲಿ ಸೇರಿಸಿದ್ದೇವೆ. ಮತ್ತೆ ೧೯೮೦–೮೧ನೇ ಬಜೆಟ್‌ನಲ್ಲಿ ೧೫ ಲಕ್ಷ ರೂಪಾಯಿಗಳು ಏನು ಇತ್ತು ಅದನ್ನು ಆನ್ ಗೋಯಿಂಗ್ ವರ್ಕ್ಸ್‌ಗೆ ಮಾತ್ರ ಈ ವರ್ಷ ಕೊಟ್ಟಿದ್ದಾರೆ. ಮುಂದಿನ ವರ್ಷ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಆದಷ್ಟು ಈ ಶಾಲೆಗಳಿಗೆ ಆದ್ಯತೆಯನ್ನು ಕೊಟ್ಟು ನಾವು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವೆಚ್. ಡಿ. ದೇವೇಗೌಡ.—ಚಾಕೇನಹಳ್ಳಿಯಲ್ಲಿರತಕ್ಕ ಶಾಲೆಯ ಕಟ್ಟಡ ಬಿದ್ದುಹೋಗಲಾಗಿ ಇವತ್ತಿನ ದಿವಸ ಮರದ ಕೆಳಗಡೆ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಆ ಬಗ್ಗೆ ತಮಗೂ ಕೂಡ ವರದಿ ಬಂದಿರಬಹುದು. ಕಟ್ಟಡ ಬಿದ್ದಿರುವುದನ್ನು ತಾವೂ ಕೂಡ ಒಪ್ಪಿದ್ದೀರಿ. ಆದ್ದರಿಂದ, ಅದಕ್ಕೆ ಏನು ಮಾಡಬೇಕೆಂದು ಯೋಚಿಸಿದ್ದೀರಿ ಎಂಬುದನ್ನು ಹೇಳುತ್ತೀರಾ ? ಸರ್ಕಾರ ವಹಿಸಿಕೊಂಡ ಮೇಲೆ ಏನಾದರೂ ಮಾಡಬೇಕಲ್ಲವೆ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಹಿಂದೆ ತಿಳಿಸಿದ ಹಾಗೆ ಆನ್ ಗೋಯಿಂಗ್ ವರ್ಕ್ಸ್‌ಗೆ ಮಾತ್ರ ಈ ವರ್ಷ ಹಣವನ್ನು ಒದಗಿಸಲಾಗಿದೆ. ೧೯೮೧-೮೨ನೇ ಸಾಲಿನಲ್ಲಿ ಖಂಡಿತವಾಗಿಯೂ ಆ ಎರಡು ಶಾಲೆಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ೧೯೮೮-೮೦ ರಿಂದ ಒಂದು ಹೊಸ ಶಾಲಾ ಕಟ್ಟಡಕ್ಕೂ ಹಣ ಒದಗಿಸಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ —೧೯೭೨ರಲ್ಲಿ ಗುಬ್ಬಿ ಪ್ರೌಢಶಾಲಾ ಕಟ್ಟಡಕ್ಕೆ ಹಿಂದಿನ ಮಂಖ್ಯಿ ಮಂತ್ರಿಗಳಾದ ಶ್ರೀಮಾನ್ ಡಿ. ದೇವರಾಜ ಅರಸರು ಅಸ್ಥಿಭಾರ ಹಾಕಿದ್ದು ತಮ್ಮ ಗಮನಕ್ಕೆ ಬಂದಿದೆಯೇ? ನಂತರ ಅದು ಏನಾಯಿತು ? ಆ ಬಗ್ಗೆ ಈ ಮನೆಯಲ್ಲಿ ಕೂಡ ಚರ್ಚೆಯಾಗಿ ಕಟ್ಟಡ ಕಟ್ಟಿಸುತ್ತೇವೆಂದು ಹೇಳಿದ್ದಾರೆ.

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಮತ್ತೊಮ್ಮೆ ಹೇಳುತ್ತೇನೆ, ಅಸ್ಥಿಭಾರ ಹಾಕಿರುವುದಕ್ಕೆ ಮತ್ತು ಬಿದ್ದು ಹೋಗಿರುವಕ್ಕ ಶಾಲಾಕಟ್ಟಡಗಳ ಬಗ್ಗೆ ಖಂಡಿತವಾಗಿಯೂ ಆದ್ಯತೆ ಕೊಡುತ್ತೇವೆ.

ಶ್ರೀ ಹೆಚ್. ಡಿ. ದೇವೇಗೌಡ —ನಾನು ತಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕೆಂದು ಕೇಳುತ್ತಿಲ್ಲ. ಸರ್ಕಾರ ಈ ವರ್ಷದ ಆಯವ್ಯಯದಲ್ಲಿ ಈ ಬಾಬಿಗಾಗಿ ಏನೇನು ಹಣ ಇಟ್ಟಿಲ್ಲ ಸ್ವಲ್ಪ ಹಣವನ್ನು ಮಾತ್ರ ಆನ್ ಗೋಯಿಂಗ್ ವರ್ಕ್ಸ್‌ಗೆ ಎಂದು ಇಡಲಾಗಿದೆ. ಆದ್ದರಿಂದ ಮುಂದಿನ ವರ್ಷವಾದರೂ ಈ ಕೆಲಸಗಳನ್ನು ತೆಗೆದುಕೊಳ್ಳಲು ಸರ್ಕಾರ ಒಪ್ಪಿಗೆ ನೀಡುತ್ತದೆಯೇ ಎಂದು ಕೇಳುತ್ತೇನೆ.

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—೧೯೮೧-೮೨ರ ಸಾಲಿನಲ್ಲಿ ಆ ಕೆಲಸಗಳಿಗೆ ಖಂಡಿತ ಆದ್ಯತೆ ಕೊಡುತ್ತೇವೆ.

ಶ್ರೀ ಎಂ. ಚಂದ್ರಶೇಖರ್.—ಈ ರೀತಿಯಾಗಿ ರಾಜ್ಯಾದ್ಯಂತ ಎಷ್ಟು ಸರ್ಕಾರಿ ಪ್ರೌಢಶಾಲೆಗಳು ಮತ್ತಿತರ ಶಾಲೆಗಳು ಕಟ್ಟಡಗಳು ಇಲ್ಲದೆ ಕೆಲಸ ಮಾಡುತ್ತಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಈ ಪ್ರಶ್ನೆ ಹೊಳೇನರಸೀಪುರಕ್ಕೆ ಮಾತ್ರ ಸೀಮಿತವಾಗಿದೆ. ಆದ್ದರಿಂದ, ಈಗ ತಮ್ಮ ಪ್ರಶ್ನೆಗೆ ಉತ್ತರಿಸಲು ನನ್ನ ಹತ್ತಿರ ಮಾಹಿತಿಗಳು ಇಲ್ಲ.

ಶ್ರೀ ಪೇರ್‌ಪಾನ್.—ನಿಮ್ಮ ಒಂದು ನೀತಿ ವಿಕರೂಪವಾಗಿದೆ. ಅಂತೆಯೇ ಶಾಲಾಕಟ್ಟಡದ ಬಗ್ಗೆ ಯಾರೇ ಕೇಳಿದರೂ ಕಟ್ಟಿಸಿಕೊಡುವುದಕ್ಕೆ ಒಪ್ಪುತ್ತೀರಾ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಆ ಧೋರಣೆ ಸರ್ಕಾರಕ್ಕೆ ಇಲ್ಲ. ಎಲ್ಲೆಲ್ಲಿ ಶಾಲೆಗಳು ಬಿದ್ದುಹೋಗಿ ಮರಗಳ ಕೆಳಗಡೆ, ದೇವಸ್ಥಾನಗಳಲ್ಲಿ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಅಂಥ ಕಡೆ ಸರ್ಕಾರ ಖಂಡಿತ ಆದ್ಯತೆ ನೀಡಿ ಕಟ್ಟಡಗಳನ್ನು ಕಟ್ಟಿಸಿಕೊಡುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಐದು ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಅಂದಾಜು ತಯಾರಿಸಿದ್ದೀರಾ ? ತಯಾರಿಸಿದ್ದರೆ ಅದರ ಪೂಬಲಗು ಏನು ಎಂದು ಹೇಳುತ್ತೀರಾ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಪ್ರಶ್ನೆಗೆ ಉತ್ತರ ಕೊಡುವಾಗಲೇ ಹೇಳಿದ್ದೇನೆ, ಇನ್ನೂ ಅಂದಾಜು ತಯಾರು ಮಾಡಿಲ್ಲ ಎಂದು. ಅಂದಾಜು ತಯಾರು ಮಾಡಿಸೋಣ ಮತ್ತು ಯಾವ ಯಾವ ಕಟ್ಟಡಕ್ಕೆ ಆದ್ಯತೆ ಕೊಡಬೇಕೋ ಅದನ್ನು ನೋಡಿಕೊಂಡು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

Construction of out-patient wing in Mandya District Hospital

443 SRI M. S. ATHMANANDA (Mandya).—Will the Minister for Health and Family Welfare be pleased to state :—

(a) whether it is a fact that construction work of out-patient wing in the Mandya District Hospital was completed 2 years back;

(b) if so. the reasons why the building is not being used for out-patient Department of the Hospital ?